# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 26.09.2013 ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಪರಿಚಯ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರ ಶ್ರೀಯುತರಾದ | ಪದನಾಮ | ಹಾಜರಿದ್ದ ಅಧಿಕಾರಿಗಳು ಶ್ರೀಯುತರಾದ |
|---|---|---|
| ಸೈಯದ್ ಹಸೀನಾ ತಾಜ್ ಸಲಾಂ | ಅಧ್ಯಕ್ಷರು | ಅಪರ ಆಯುಕ್ತರು (ಕಲ್ಯಾಣ) |
| ಬಿ.ಎಸ್.ಮುಂಜುನಾಥರೆಡ್ಡಿ | ಸದಸ್ಯರು | ಅಪರ ಆಯುಕ್ತರು (ಬೊಮ್ಮನಹಳ್ಳಿ / ದಾಸರಹಳ್ಳಿ) |
| ಎಸ್.ದಯಾನಂದ್ | ಸದಸ್ಯರು | |
| ಮುನಿಸ್ವಾಮಿಗೌಡ | ಸದಸ್ಯರು | ಉಪ ಆಯುಕ್ತರು (ಮಹದೇವಪುರ / ದಕ್ಷಿಣ / ಪಶ್ಚಿಮ) |
| ಎನ್.ಚಂದ್ರಶೇಖರ್ ರಾಜು | ಸದಸ್ಯರು | |
| ಹೆಚ್.ಆರ್.ಕೃಷ್ಣಪ್ಪ | ಸದಸ್ಯರು | ಉಪ ನಿಯಂತ್ರಕರು (ಹಣಕಾಸು) |
| ಎಂ.ಶಕೀಲ ಮುನಿರಾಜು | ಸದಸ್ಯರು | ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ / ಯಲಹಂಕ) |
| ಎನ್.ಚಂದ್ರ | ಸದಸ್ಯರು | |
| ರಾಜಣ್ಣ | ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) |
| | | ಕಿರಿಯ ಕಾನೂನು ಅಧಿಕಾರಿ (ಕೇಂದ್ರ) |
| | | ಕಲ್ಯಾಣಾಧಿಕಾರಿ (ಕೇಂದ್ರ / ಪೂರ್ವ / ಪಶ್ಚಿಮ / ದಕ್ಷಿಣ / ರಾ.ರಾ.ನ / ದಾಸರಹಳ್ಳಿ / ಬೊಮ್ಮನಹಳ್ಳಿ / ಯಲಹಂಕ / ಮಹದೇವಪುರ) |

ಸಭೆಯು ಬೆಳಿಗ್ಗೆ 11.30 ಗಂಟೆಗೆ ಪ್ರಾರಂಭವಾಯಿತು. ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳಿಗೆ ಸುಸ್ವಾಗತ ಕೋರುತ್ತಾ, ಸದರಿ ಸಭೆಯನ್ನು ಸುಗಮವಾಗಿ ನಡೆಸಲು ಸಹಕರಿಸುವಂತೆ ಕೋರುತ್ತಾ, ಸಭೆಯಲ್ಲಿರುವವರೆಲ್ಲರೂ ತಮ್ಮ ತಮ್ಮ ಪರಿಚಯವನ್ನು ಮಾಡಿಕೊಳ್ಳುವಂತೆ ತಿಳಿಸಿದರು.

Syed Hasina Salam

ಅಧ್ಯಕ್ಷರು

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಮತ್ತು ಅಧಿಕಾರಿಗಳು ತಮ್ಮ ತಮ್ಮ ಪರಿಚಯವನ್ನು ಮಾಡಿಕೊಂಡರು.

ಅಪರ ಆಯುಕ್ತರು (ಕಲ್ಯಾಣ) ರವರು ಸಭೆಯನ್ನು ಉದ್ದೇಶಿಸುತ್ತಾ, 2013-14ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುದಾನ ಹಂಚಿಕೆ ಮತ್ತು ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ ವಿವರಿಸುತ್ತಾ, ಪ್ರಸಕ್ತ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಕಲ್ಯಾಣ ಶಾಖೆಗೆ ಸಂಬಂಧಿಸಿದಂತೆ ಬಾಕಿ ಮೊತ್ತ, ಮುಂದುವರಿದ ಕಾಮಗಾರಿ, ವೇತನ ಹಾಗೂ ಚಾಲ್ತಿ ಕಾಮಗಾರಿ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಒಟ್ಟು ರೂ.71726.00 ಲಕ್ಷ ಗಳನ್ನು ಮೀಸಲಿರಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಸಂಬಂಧ ಪ್ರಸಕ್ತ ಸಾಲಿನ ಶೇಕಡ 22.75 ರ ಅನುದಾನದಡಿ ಮೀಸಲಿಟ್ಟಿರುವ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ 198 ವಾರ್ಡ್‌ಗಳಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ/ಪಂಗಡದವರ 2011ರ ಜನಗಣತಿಯ ಅನ್ವಯ ವಲಯವಾರು ಹಂಚಿಕೆ ಮಾಡಿರುವ ಮೊತ್ತವನ್ನು ಸಭೆಗೆ ತಿಳಿಸಿದರು.

ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕ್ರಮಾಂಕವಾಗಿ ರೂ.5600.00 ಲಕ್ಷ ಮತ್ತು ರೂ.15,000.00 ಲಕ್ಷಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿರುವ 198 ವಾರ್ಡ್‌ಗಳಿಗೆ ಸಮಾನಾಂತರವಾಗಿ ಹಂಚಿಕೆ ಮಾಡಿರುವ ಬಗ್ಗೆ ಅಂಕಿಅಂಶಗಳನ್ನು ಸಭೆಗೆ ತಿಳಿಸಲಾಗಿರುತ್ತದೆ.

ಇದೇ ರೀತಿ ರಾತ್ರಿ ತಂಗುದಾಣ ನಿರ್ಮಾಣ, ವಿಕಲಚೇತನರು ಹಾಗೂ ಸಾಮಾನ್ಯ ವರ್ಗದವರ ಕಲ್ಯಾಣ ಕಾರ್ಯಕ್ರಮಗಳು ಕುರಿತಂತೆ ವಿವರಿಸುತ್ತಾ ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟಿರುವ ಅನುದಾನವನ್ನು ಕೂಡ ವಾರ್ಡ್‌ವಾರು ಹಂಚಿಕೆ ಮಾಡಿ ಸಮಿತಿಯ ತೀರ್ಮಾನಕ್ಕಾಗಿ ಕಡತವನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಕಡತಕ್ಕೆ ಸಂಬಂಧಿಸಿದಂತೆ ತ್ವರಿತವಾಗಿ ಸಮಿತಿಯಿಂದ ಅನುಮೋದನೆ ದೊರೆತರೆ, ಸಂಬಂಧಿಸಿದ ಅಧಿಕಾರಿಗಳಿಂದ ಕಾರ್ಯಕ್ರಮವಾರು ಹಾಗೂ ವಾರ್ಡ್‌ವಾರು ಕ್ರಿಯಾ ಯೋಜನೆಯನ್ನು ತಯಾರಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುಕೂಲವಾಗುತ್ತದೆ ಎಂದು ಅಪರ ಆಯುಕ್ತರು (ಕಲ್ಯಾಣ) ರವರು ಸಭೆಯಲ್ಲಿ ಪ್ರಸ್ತಾಪಿಸಿದರು.

ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳು ಹಿಂದಿನ ಸಾಲುಗಳಲ್ಲಿ ಕೇವಲ ಕಾಮಗಾರಿ ಕಾರ್ಯಕ್ರಮಗಳಿಗೆ ಮಾತ್ರ ಒತ್ತು ಕೊಟ್ಟಿದ್ದು, ಬೆರಳೆಣಿಕೆಯಷ್ಟು ಮಾತ್ರ ಕಲ್ಯಾಣ ಕಾರ್ಯಕ್ರಮಗಳಾದ ಸೈಕಲ್, ಡೋಬಿ ಕಿಟ್, ತಳ್ಳುವ ಗಾಡಿ, ಮೋಟಾರ್ಸೈಕಲ್ ತ್ರಿಚಕ್ರ

ವಾಹನಗಳನ್ನು, ಅದರಲ್ಲಿಯೂ ಕೆಲವು ವಾರ್ಡ್‌ಗಳಲ್ಲಿ ಮಾತ್ರ ಫಲಾನುಭವಿಗಳಿಗೆ ಹಂಚಿಕೆ ಮಾಡಿರುವುದಾಗಿ ತಿಳಿಸುತ್ತಾ ವಿಷಾದ ವ್ಯಕ್ತಪಡಿಸಿರುತ್ತಾರೆ.

ಮುಂದುವರಿದಂತೆ, ಹಿಂದಿನ ಸಾಲುಗಳಲ್ಲಿ ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ವಲಯವಾರು ಹಂಚಿಕೆಯಾಗಿರುವ ಅನುದಾನದ ವಿವರವನ್ನು ಸಮಿತಿಯ ಸದಸ್ಯರುಗಳು ತಿಳಿಸುವಂತೆ ಅಧಿಕಾರಿ ವರ್ಗದವರನ್ನು ಕೇಳಿದಾಗ ಅಂಕಿಅಂಶಗಳನ್ನು ಉಪ ನಿಯಂತ್ರಕರು (ಹಣಕಾಸು) ರವರು ಮುಂದಿನ ಸಭೆಗೆ ವರ್ಷವಾರು ಹಾಗೂ ಕಾರ್ಯಕ್ರಮವಾರು ಪಟ್ಟಿಯನ್ನು ನೀಡುವುದಾಗಿ ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಬಹಳ ಕಡಿಮೆ ಮೊತ್ತವನ್ನು ಮೀಸಲಿಟ್ಟಿರುವ ಬಗ್ಗೆ ಸಮಿತಿಯ ಸದಸ್ಯರು ಪ್ರಸ್ತಾವನೆಯನ್ನು ಸಭೆಯ ಮುಂದೆ ಪ್ರಸ್ತಾಪಿಸಿದಾಗ, ಪಾಲಿಕೆಗೆ ಬರುವ ಒಟ್ಟು ಆದಾಯ ಮತ್ತು ಅನುದಾನಗಳಲ್ಲಿ ಆಡಳಿತ ವೆಚ್ಚವನ್ನು ಕಡಿತಗೊಳಿಸಿ, ಉಳಿದ ಮೊತ್ತದಲ್ಲಿ ಶೇಕಡ 22.75ರಷ್ಟು ಮೀಸಲಿಡಬೇಕಾಗಿರುತ್ತದೆ. ಅದೇ ರೀತಿ ಆದಾಯ ಮತ್ತು ಅನುದಾನಗಳನ್ನು ನಿರೀಕ್ಷಿಸಿ ಅಯವ್ಯಯ ಪಟ್ಟಿಯನ್ನು ತಯಾರಿಸುವುದು ವಾಡಿಕೆಯಾಗಿರುತ್ತದೆ. ಆ ರೀತಿ ಕೈಗೊಳ್ಳುವ ವೇಳೆಯಲ್ಲಿ ನಿರೀಕ್ಷಿತ ಆದಾಯ ಮತ್ತು ಅನುದಾನದ ಮೊತ್ತಕ್ಕಿಂತ ಹೆಚ್ಚಾಗಿ ಹಿಂದಿನ ಸಾಲುಗಳಲ್ಲಿ ವ್ಯಯ ಮಾಡಲಾಗಿರುತ್ತದೆ. ಆ ಕಾರಣದಿಂದಾಗಿ ಪ್ರಸಕ್ತ ಸಾಲಿನಲ್ಲಿ ಸರಿದೂಗಿಸುವ ನಿಟ್ಟಿನಲ್ಲಿ ಅಯವ್ಯಯವನ್ನು ಮಂಡಿಸಲಾಗಿರುತ್ತದೆ ಎಂದು ಹಣಕಾಸು ಇಲಾಖೆಯ ಅಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ.

ಮುಂದುವರೆದಂತೆ, ಕೆಲವು ಸದಸ್ಯರು ಪ್ರಸಕ್ತ ಸಾಲಿನಲ್ಲಿ ಒಂಟಿ ಮನೆ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರಿಗೆ, ಶೇಕಡ 22.75ರಡಿ ಹೆಚ್ಚಿನ ಅನುದಾನವನ್ನು ಮೀಸಲಿಟ್ಟಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಹಿಂದಿನ ಸಾಲುಗಳಲ್ಲಿ ಶೇಕಡ 22.75ರಡಿ ಮನೆ ನಿರ್ಮಾಣಕ್ಕೆ ಒತ್ತು ನೀಡಿರುವುದರ ಜೊತೆಗೆ ನಿರ್ಮಾಣವನ್ನು ಕೈಗೊಳ್ಳಲಾಗಿರುತ್ತದೆ. ಆದರೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ ನಿರೀಕ್ಷಿತ ಮಟ್ಟದಲ್ಲಿ ಅನುದಾನವನ್ನು ಹಿಂದಿನ ಸಾಲುಗಳಲ್ಲಿ ನೀಡದಿದ್ದ ಕಾರಣ ಪ್ರಸಕ್ತ ಸಾಲಿನಲ್ಲಿ ಹೆಚ್ಚಿನ ಅನುದಾನವನ್ನು ಮೀಸಲಿಡಲಾಗಿದೆಯೆಂದು ಅಧಿಕಾರಿಗಳು ಸಭೆಗೆ ತಿಳಿಸಿರುತ್ತಾರೆ.

ಮಾನ್ಯ ಸದಸ್ಯರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪ್ರಮುಖವಾಗಿ ಆಟೋ ರಿಕ್ಷಾ, ಅಡುಗೆ ಅನಿಲ, ಬೈಸಿಕಲ್ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಸಾರ್ವಜನಿಕರ ಬೇಡಿಕೆ ಹಾಗೂ ಅವಶ್ಯಕತೆಯ ಆಧಾರದ ಮೇರೆಗೆ ಮುಂದಿನ ಸಭೆಯಲ್ಲಿ ಅಂತಿಮಗೊಳಿಸುವುದಾಗಿ ಸಭೆಗೆ ತಿಳಿಸಿದರು.

Syed Hasin Taj

ಅಧ್ಯಕ್ಷರು



ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪರ ಆಯುಕ್ತರು (ಕಲ್ಯಾಣ) ರವರು ಮಾತನಾಡುತ್ತಾ ಈ ಹಿಂದೆ ಕಲ್ಯಾಣ ಕಾರ್ಯಕ್ರಮದಡಿ ಟಿ.ವಿ. ರಿಪೇರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಆದರೆ, ಪ್ರಸ್ತುತ ದಿನಗಳಲ್ಲಿ ಮೊಬೈಲ್ ರಿಪೇರಿ ಕಾರ್ಯಕ್ರಮವು ಚಾಲ್ತಿಯಲ್ಲಿರುವುದರಿಂದ ಈ ಕಾರ್ಯಕ್ರಮವನ್ನು ಪ್ರಸಕ್ತ ಸಾಲಿನಲ್ಲಿ ಅಳವಡಿಸಿಕೊಂಡರೆ, ಯುವಕರಿಗೆ ಹೆಚ್ಚು ಉಪಯುಕ್ತವಾಗುತ್ತದೆಂದು ತಿಳಿಸಿದರು. ನಂತರ 2012-13ನೇ ಸಾಲಿನಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಆಹ್ವಾನಿಸಿರುವ ಅರ್ಜಿಗಳನ್ನು ಪ್ರಸಕ್ತ ಸಾಲಿನಲ್ಲಿ ಪರಿಗಣಿಸಲು ಸೂಕ್ತ ನಿರ್ದೇಶನವನ್ನು ಕೋರುತ್ತಾ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಒಟ್ಟಾರೆ ಸದರಿ ಸಭೆಯಲ್ಲಿ ಪರಸ್ಪರ ಪರಿಚಯ ಹಾಗೂ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಸಮಗ್ರ ವಿಷಯಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸುತ್ತಾ, ಪ್ರಸಕ್ತ ಸಾಲಿನಲ್ಲಿ ಮೀಸಲಿಟ್ಟಿರುವ ಅನುದಾನವನ್ನು ಪರಿಣಾಮಕಾರಿಯಾಗಿ ಕಾರ್ಯಕ್ರಮಗಳ ಮುಖಾಂತರ ಅನುಷ್ಠಾನಗೊಳಿಸಲು ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗದವರಿಗೆ ತಿಳಿಸುತ್ತಾ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ
2. ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3. ಆಡಳಿತ ಪಕ್ಷ/ವಿರೋಧ ಪಕ್ಷ ಮತ್ತು ಜೆ.ಡಿ.ಎಸ್ ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಆಯುಕ್ತರವರ ಆಪ್ತಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5. ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಕಳುಹಿಸಿದೆ.
6. ಅಪರ ಆಯುಕ್ತರು (ಕಲ್ಯಾಣ) ರವರ ಅವಗಾಹನೆಗೆ ಕಳುಹಿಸಿದೆ.
7. ಮುಖ್ಯ ಲೆಕ್ಕಾಧಿಕಾರಿ/ಮುಖ್ಯ ಆರ್ಥಿಕ ಅಧಿಕಾರಿಗಳ ಅವಗಾಹನೆಗೆ ಕಳುಹಿಸಿದೆ.
8. ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರವರಿಗೆ ಅವಗಾಹನೆಗೆ ಕಳುಹಿಸಿದೆ.
9. ಪ್ರಧಾನ ಅಭಿಯಂತರ ಅವಗಾಹನೆಗೆ ಕಳುಹಿಸಿದೆ.
10. ವಲಯಗಳ ಮುಖ್ಯ ಅಭಿಯಂತರರ ಅವಗಾಹನೆಗೆ ಕಳುಹಿಸಿದೆ.
11. ಕಾನೂನು ಕೋಶದ ಮುಖ್ಯಸ್ಥರ ಅವಗಾಹನೆಗೆ ಕಳುಹಿಸಿದೆ.
12. ಕಲ್ಯಾಣಾಧಿಕಾರಿ (ಕೇಂದ್ರ) ಮತ್ತು ಎಲ್ಲಾ ವಲಯಗಳ ಕಲ್ಯಾಣಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
13. ಮಾಹಿತಿ ತಂತ್ರಜ್ಞಾನ ಸಲಹೆಗಾರರವರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಕೋರಿದೆ.
14. ಕಛೇರಿ ಪ್ರತಿ